GULBARGA UNIVERSITY
"Jnana Ganga", GULBARGA - 585 106, Karnataka, India.
Phone: 08472-263202
Fax. 08472-263206
E-Mail: registrargug@rediffmail.com

ಕ್ರ.ಸಂ. ಗುವಿಕ/ಸಿ&ವಿಪ/ಸಭೆ /2017-18/28 ದಿನಾಂಕ:- 10/5/2017

ಗೆ,
ಗುಲಬರ್ಗಾ ವಿಶ್ವವಿದ್ಯಾಲಯದ ಎಲ್ಲಾ
ಸಿಂಡಿಕೇಟ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ 19.05.2017 ರಂದು ಬೆಳಿಗ್ಗೆ 11.00 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ "ಸಿಂಡಿಕೇಟ ಸಭಾಂಗಣ"ದಲ್ಲಿ ಜರುಗುವ ಸಿಂಡಿಕೇಟ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಕಳುಹಿಸುವ ಕುರಿತು.

---

ದಿನಾಂಕ 19.05.2017 ರಂದು ಬೆಳಿಗ್ಗೆ 11.00 ಗಂಟೆಗೆ, ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ "ಸಿಂಡಿಕೇಟ ಸಭಾಂಗಣ"ದಲ್ಲಿ ಜರುಗುವ ಸಿಂಡಿಕೇಟ ಸಾಮಾನ್ಯ ಸಭೆಯ ಕಾರ್ಯಸೂಚಿನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

10/5/17
ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಅಡಕ:- ಕಾರ್ಯಸೂಚಿ

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
3. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
4. ಗ್ರಂಥಪಾಲರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
5. ಹಣಕಾಸು ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
6. ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ಗು. ವಿ. ಕಲಬುರಗಿ.
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
8. ನಿರ್ದೇಶಕರು , ದೈಹಿಕ ಶಿಕ್ಷಣ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
9. ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
10. ಸ್ಥಳೀಯ ಅಭಿಯಂತರರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
11. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, 'ಜ್ಞಾನ ತುಂಗಾ",ಯರಗೇರಾ ರೋಡ, ರಾಯಚೂರು
12. ವಿಶೇಷಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಹಾಲಹಳ್ಳಿ, ಬೀದರ
13. ನೋಡಲ್ ಆಫೀಸರ್, ಅಂಕಿ-ಸಂಖ್ಯೆ ಘಟಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
14. ಮುಖ್ಯಸ್ಥರು, ಗಣಕ ಕೇಂದ್ರ, ಪರೀಕ್ಷಾ ವಿಭಾಗ ಆವರಣ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
15. ಎಲ್ಲಾ ಉಪಕುಲಸಚಿವರು, ಸಹಾಯಕ ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
16. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ,ಆಪ್ತ ಸಹಾಯಕರು, ಗುಲಬರ್ಗಾ, ವಿಶ್ವವಿದ್ಯಾಲಯ, ಕಲಬುರಗಿ.
17. ಕಛೇರಿ ಕಡತಕ್ಕೆ.

**ದಿನಾಂಕ 19.05.2017 ರಂದು ಬೆಳಿಗ್ಗೆ 11.00 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿರುವ "ಸಿಂಡಿಕೇಟ ಸಭಾಂಗಣ"ದಲ್ಲಿ ಜರುಗುವ ಸಿಂಡಿಕೇಟ ಸಾಮಾನ್ಯ ಸಭೆಯ ಕಾರ್ಯಸೂಚಿ.**

**ವಿಷಯ ಕ್ರಮಾಂಕ (1)**

ದಿನಾಂಕ 25.03.2017ರ ನಂತರ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಬಗ್ಗೆ ಕುಲಪತಿಗಳಿಂದ ವರದಿ.

**ವಿಷಯ ಕ್ರಮಾಂಕ (2)**

ದಿನಾಂಕ 25.03.2017ರಂದು ಜರುಗಿದ ಸಿಂಡಿಕೇಟಿನ ಸಾಮಾನ್ಯ ಸಭೆಯ ನಡೆವಳಿಗಳ ದೃಢೀಕರಣ.

**ವಿಷಯ ಕ್ರಮಾಂಕ (3)**

ದಿನಾಂಕ 11.11.2016ರಂದು ಜರುಗಿದ ಸಿಂಡಿಕೇಟ ಅಸಾಮಾನ್ಯ ಸಭೆ, ದಿನಾಂಕ 8.12.2016ರಂದು ಜರುಗಿದ ಸಿಂಡಿಕೇಟ ಅಸಾಮಾನ್ಯ ಸಭೆ, ದಿನಾಂಕ 02.02.2017ರಂದು ಜರುಗಿದ ಸಾಮಾನ್ಯ ಸಿಂಡಿಕೇಟ ಮತ್ತು ದಿನಾಂಕ 15.02.2017ರಂದು ಜರುಗಿದ ಸಿಂಡಿಕೇಟಿನ ಅಸಾಮಾನ್ಯ ಸಭೆಗಳ ನಡೆವಳಿಗಳ ಮೇಲೆ ತೆಗೆದುಕೊಂಡ ಕ್ರಮದ ವರದಿ.

**ದಿನಾಂಕ 25.03.2017ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಮುಂದೂಡಿದ ವಿಷಯಗಳು**

**ವಿಷಯ ಕ್ರಮಾಂಕ (4.1)**

ವಿಷಯ:- ಶ್ರೀ ವಿಜಯಕುಮಾರ ಶಂಕರ ಗೌರ ಅವರಿಗೆ ತಡೆಹಿಡಿಯಲಾಗಿದ್ದ ವಾರ್ಷಿಕ ವೇತನ ಬಡ್ತಿ ಮತ್ತು ಪರೀಕ್ಷತಾ ಅವಧಿ ಘೋಷಿಸುವ ಕುರಿತು.

ಉಲ್ಲೇಖ:- 1) ಸದರಿಯವರ ಅರ್ಜಿ ದಿನಾಂಕ 11.05.2016
2) ನ್ಯಾಯವಾದಿಗಳ ಸಲಹೆ ಪತ್ರ ದಿನಾಂಕ 22.10.2016
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 09.02.2017

<u>ಪ್ರಸ್ತಾವನೆ:-</u>

ಶ್ರೀ ವಿಜಯಕುಮಾರ ಶಂಕರ ಗೌರೆ, ದಿನಾಂಕ 10.01.2012 ರಂದು ಸಿಪಾಯಿ ಎಂಬು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದ ಸೇವೆಗೆ ಸೇರಿರುತ್ತಾರೆ. ಸದರಿಯವರ ಅತ್ತಿಗೆಯ ಕೊಲೆ ಆಪಾದನೆ ಮೇರೆಗೆ ದಿನಾಂಕ 31.12.2012 ರಂದು ಪೋಲಿಸರು ದಸ್ತಗಿರಿ ಮಾಡಿದರು. ಈ ಸಂಬಂಧ ಅವರನ್ನು ದಿನಾಂಕ 19.01.2013 ರಂದು ವಿಶ್ವವಿದ್ಯಾಲಯ ಸೇವೆಯಿಂದ ಅಮಾನತ್ತಿನಲ್ಲಿ ಇಡಲಾಗಿತ್ತು. ಮತ್ತು ಇವರು ದಿನಾಂಕ 10.07.2013 ರಂದು ನ್ಯಾಯಾಲಯದಿಂದ ಜಾಮೀನು ಪಡೆದು ವಿಶ್ವವಿದ್ಯಾಲಯದ ಕೆಲಸಕ್ಕೆ ಸೇರಿಸಿಕೊಳ್ಳಲು ಮನವಿ ಪತ್ರ ಸಲ್ಲಿಸಿದರು. ಈ ವಿಷಯವನ್ನು ದಿನಾಂಕ 08.05.2014 ರಂದು ಸಿಂಡಿಕೇಟ ಸಭೆಗೆ ಮಂಡಿಸಲಾಗಿತ್ತು. ಸಿಂಡಿಕೇಟ ಸಭೆಯ ನಿರ್ಣಯದಂತೆ ಅವರ ಅಮಾನತ್ತನ್ನು ಹಿಂಪಡೆದುಕೊಂಡು ಮರಳಿ ಅವರನ್ನು ದಿನಾಂಕ 12.06.2014 ರಂದು ಕೆಲಸಕ್ಕೆ ಸೇರಿಸಿಕೊಳ್ಳಲಾಯಿತು.

ಮುಂದುವರೆದು ಸದರಿಯವರನ್ನು ಘನ ನ್ಯಾಯಾಲಯವು ದಿನಾಂಕ 26.04.2016 ರಂದು ಅವರ ಮೇಲಿದ್ದ ಕೊಲೆ ಆಪಾದನೆ ಖುಲಾಸೆ ಮಾಡಿರುತ್ತದೆ. ಆದ್ದರಿಂದ ಸದರಿಯವರು ತಮ್ಮ ಪರೀಕ್ಷಾ ಅವಧಿ ಮತ್ತು ಬಾಕಿ ಉಳಿದಿದ್ದ ವಾರ್ಷಿಕ ವೇತನ ಬಡ್ತಿ ಮಂಜೂರಿಸಲು ಅರ್ಜಿ ಸಲ್ಲಿಸಿರುತ್ತಾರೆ. ಈ ವಿಷಯವಾಗಿ ಕಾನೂನು ಅಭಿಪ್ರಾಯ ಪಡೆಯಲಾಗಿದ್ದು, ಕಾನೂನು ಅಭಿಪ್ರಾಯದಂತೆ ನ್ಯಾಯವಾದಿಗಳು ಅವರ ವಾರ್ಷಿಕ ವೇತನ ಬಡ್ತಿ ಮತ್ತು ಪರೀಕ್ಷಾ ಅವಧಿಯನ್ನು ಘೋಷಿಸಬಹುದೆಂದು ತಮ್ಮ ಸಲಹೆ ನೀಡಿರುತ್ತಾರೆ. ಮಾನ್ಯ ಕುಲಪತಿಗಳ ಅನುಮೋದನೆಯಂತೆ ಈ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿಷಯ ಕ್ರಮಾಂಕ (4.2)

ವಿಷಯ:-೨೦೧೬-೧೭ ನೇ ಸಾಲಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿರುವ ೪ ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆಯನ್ನು ಮಾಡಿರುವ ಕುರಿತು.

ಉಲ್ಲೇಖ:-೧. ಟೆಂಡರ್ ಅಧಿಸೂಚನೆ ಸಂಖ್ಯೆ: ಗುವಿಕ/ಪ.ಜಾ.ಪ.ಪಂ.ಘಟಕ/೨೦೧೬-೧೭/೭೪ ದಿನಾಂಕ ೧೩/೦೭/೨೦೧೭.
೨. ದಿನಾಂಕ ೦೯/೦೮/೨೦೧೬ ರಂದು ಜರುಗಿದ ಸಿಂಡಿಕೇಟ್ ಸಭೆಯ ನಡುವಳಿ ಸಂಖ್ಯೆ ೩೨.
೩. ದಿನಾಂಕ ೦೯/೧೧/೨೦೧೬ರಂದು ಜರುಗಿದ ಸಿಂಡಿಕೇಟ್ ಸಭೆಯ ನಡುವಳಿ ಸಂಖ್ಯೆ ೦೮.
೪. ನಮ್ಮ ಕಛೇರಿಯ ಆದೇಶದ ಸಂಖ್ಯೆ ೧೧೮, ದಿನಾಂಕ ೩೧/೦೮/೨೦೧೬
೫. ನಮ್ಮ ಕಛೇರಿಯ ಆದೇಶದ ಸಂಖ್ಯೆ ೧೮೦, ದಿನಾಂಕ ೦೭/೧೨/೨೦೧೬
೬. ದಿನಾಂಕ ೦೨/೦೨/೨೦೧೭ ರಂದು ಜರುಗಿದ ಸಿಂಡಿಕೇಟ್ ಸಭೆಯ ನಡುವಳಿ ಸಂಖ್ಯೆ ೦೫

<u>ಟಿಪ್ಪಣಿ:-</u>

೨೦೧೬-೧೭ ನೇ ಸಾಲಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿರುವ ೪ ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆಯನ್ನು ಮಾಡುವುದಕ್ಕೆ ಉಲ್ಲೇಖ (೨) ಮತ್ತು (೩) ರಲ್ಲಿ ನಮೂದಿಸಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಉಲ್ಲೇಖ (೪) & (೫) ರಲ್ಲಿ ನಮೂದಿಸಿದ ಆದೇಶಗಳ ಪ್ರಕಾರ ಅಧ್ಯಕ್ಷರು ಶ್ರೀ ಬಿರೇಂದ್ರ ಕೇಶವ ತಾರಕನಂದ ಮರಿ ರೂರಲ್ ಎಜ್ಯುಕೇಶನ್ ಸೊಸೈಟಿ (ರಿ) ಕನಕಗಿರಿ ತಾಲೂಕ ಗಂಗಾವತಿ, ಜಿಲ್ಲಾ ಕೊಪ್ಪಳ, ಇವರಿಗೆ

ಆದೇಶವನ್ನು ನಿಡಲಾಗಿತ್ತು. ಸದರಿಯವರು ವಸತಿ ನಿಲಯಗಳಲ್ಲಿ ಊಟದ ವ್ಯವಸ್ಥೆಯನ್ನು ಕ್ರಮಬದ್ಧವಾಗಿ ನಿಯಮಗಳನುಸಾರ ಮಾಡದೆ ಇರುವ ಕಾರಣ ಅವರನ್ನು ಕಪ್ಪುಪಟ್ಟಿಯಲ್ಲಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅವರಿಗೆ ನೀಡಿರುವ ಅನುಮತಿಯನ್ನು ರದ್ದುಗೊಳಿಸುವಂತೆ ಉಲ್ಲೇಖ (೬) ರಲ್ಲಿ ನಮೂದಿಸಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಕಡತವನ್ನು ಮಂಡಿಸಲಾಗಿದೆ.

ಆದರೆ ಸದರಿಯವರು ಊಟದ ವ್ಯೆವಸ್ಥೆಯನ್ನು ಮಾಡುವ ಸಮಯದಲ್ಲಿ ಫರ್ಮ್‌ಗಳಿಂದ ಆಹಾರ ಧಾನ್ಯ, ತರಕಾರಿ ಮತ್ತು ಉರುವಲು ಕಟ್ಟಿಗೆಯನ್ನು ತೆಗೆದುಕೊಂಡು ಬಂದಿದ್ದು, ಅವರಿಗೆ ಹಣವನ್ನು ಪಾವತಿಸಿರುವುದಿಲ್ಲ, ಆದ ಕಾರಣ ಅವರುಗಳು ಮನವಿ ಪತ್ರವನ್ನು ಸಲ್ಲಿಸಿ ತಮಗೆ ಬರಬೇಕಾದ ಹಣವನ್ನು ಅವರಿಂದ ಕೊಡಿಸುವಂತೆ ತಿಳಿಸಿರುವರು. ಅಲ್ಲದೆ ಸದರಿ ವಸತಿ ನಿಲಯಗಳಲ್ಲಿರುವ ಓಬಿಸಿ ಮತ್ತು ಜಿ.ಎಮ್. ವಿದ್ಯಾರ್ಥಿಗಳಿಂದ ಪ್ರಾರಂಭದಲ್ಲಿ ಮೆಸ್ಸ್ ಮುಂಗಡ ಹಣವನ್ನು ಟೆಂಡರ್‌ದಾರರು ಪಡೆದಿರುವರೆಂದು ಸಂಭಂದಿಸಿದ ಪರಿಪಾಲಕರು ಪತ್ರಗಳನ್ನು ಸಲ್ಲಿಸಿರವರು.

ಟೆಂಡರ್‌ದಾರರಿಗೆ ವಿಶವವಿದ್ಯಾಲದಿಂದ ಪಾವತಿಸಬೇಕಾದ ಅಂದಾಜು ಹಣ ರೂ. ೧೪.೦೦ ಲಕ್ಷ ಇದ್ದು ಫರ್ಮ್‌ದಾರರಿಗೆ ಓಬಿಸಿ ಮತ್ತು ಜಿ.ಎಮ್. ವಿದ್ಯಾರ್ಥಿಗಳಿಗೆ ಕೊಡಬೇಕಾದ ಹಣ ರೂ.೨೭,೭೪,೭೮೩/- ಇರುತ್ತದೆ. ಬಾಕಿ ಇರುವ ಹಣದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದ್ದು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

| ಅನುಕ್ರಮ ಸಂಖ್ಯೆ | ಫರ್ಮ್ ಹೆಸರು | ಬಾಕಿ ಹಣ |
|---|---|---|
| ೧ | ವೆಂಕಟ ರಾಜು ವಿ. ತುಳಸಯ್ಯ ಶೆಟ್ಟಿ ಕಿರಣ<br>ಸ್ಟೋರ್ಸ್ ನೇತಾಜಿ ರೋಡ್ ರಾಯಚೂರ | ರೂ.೪,೪೯,೯೫೧/- |
| ೨ | ಮ. ಕೊಸಗಿ ಬಡೆಸಾಬ್ ಕಾಯಿಪಲ್ಯ<br>ಮಾರಾಟಗಾರರು ಏರಗೇರಾ ರಾಯಚೂರು | ರೂ. ೬೬,೩೦೦/- |
| ೩. | ಶಿವಾ ವೆಜಿಟೆಬಲ್ ಮರ್ಚೆಂಟ್ ಸೆಡಂ ರೋಡ್ ಕಲ;ಬುರಗಿ | ರೂ. ೧,೧೫,೫೩೦/- |
| ೪. | ಪರವೆಜ್ ಪಾಶಾ, ಅಶಿವ್ ಪಾಶಾ ಹಿಂದೂಸ್ತಾನ್ ಶ್ಯಾಮಿಲ್ ಕಲಬುರಗಿ | ರೂ. ೮೯,೦೫೫/- |
| ೫. | ಕಾಶಪ್ಪ ತಂದೆ ಚಂದ್ರಪ್ಪಾ ಊಟದ ಮೆಲ್ವಿಚಾರಕರು, ಕೃಷ್ಣಾ ವಸತಿ ನಿಲಯ<br>ಅಶೋಕ ತಂದೆ ವಿಠ್ಠಲ್ ಊಟದ ಮೆಲ್ವಿಚಾರಕರು ಡಾ.ಬಿ.ಆರ್ ಅಂಬೇಡ್ಕರ್<br>ವಸತಿ ನಿಲಯ | ಎರಡು ತಿಂಗಳ ವೇತನ |
| ೬. | ಸಾಮ್ರಾಟ್ ಅಶೋಕ ಗುಲ್ಬರ್ಗಾ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ<br>ರಾಯಚೂರಿನ ವಸತಿ ನಿಯಲ | ೪ ತಿಂಗಳು ೧೫ ದಿವಸ ವೇತನ |
| ೭. | ಪರಿಪಾಲಕರು ಡಾ.ಬಿ.ಆರ್ ಅಂಬೇಡ್ಕರ್ ವಸತಿ ನಿಲಯ<br>ಓ.ಬಿ.ಸಿ/ಜಿ.ಎಮ್. ವಿದ್ಯಾರ್ಥಿಗಳ ಮೆಸ್ಸ್ ಮುಂಗಡ ಹಣ<br>ಜಿ.ಕೆ.ಟ್ರೆಡಿಂಗ್ ಕಟ್ಟಿಗೆ ಕಂಪನಿ<br>ಮಹೇಶ ಹೊಟೆಲ್ ಕಲಬುರಗಿ | <br>ರೂ. ೧,೦೬,೦೦೦/-<br>ರೂ. ೭,೧೬೧/-<br>ರೂ. ೮೬೯೦/- |
| ೮. | ಮುಖ್ಯ ಪರಿಪಾಲಕರು ವೃತ್ತಿ ನಿರತ ಮಹಿಳಾ ವಸತಿ ನಿಲಯ<br>ಓ.ಬಿ.ಸಿ/ಜಿ.ಎಮ್. ವಿದ್ಯಾರ್ಥಿಗಳ ಮೆಸ್ಸ್ ಮುಂಗಡ ಹಣ | <br>ರೂ. ೩,೧೭,೫೦೦/- |
| ೯. | ಮುಖ್ಯ ಪರಿಪಾಲಕರು ಗಂಗಾ ವಸತಿ ನಿಲಯ<br>ಓ.ಬಿ.ಸಿ/ಜಿ.ಎಮ್. ವಿದ್ಯಾರ್ಥಿಗಳ ಮೆಸ್ಸ್ ಮುಂಗಡ ಹಣ | <br>ರೂ. ೨,೩೭,೫೦೦/- |
| ೧೦. | ಶ್ರೀ ಶ್ರಿನಿವಾಸ ಟ್ರೆಡಿಂಗ ಕಂಪನಿ ಕಲಬುರಗಿ (ಆಹಾರ ಧಾನ್ಯ) | ರೂ.೧೩,೭೭,೦೯೬/- |

ಒಟ್ಟು ಹಣ ರೂ.೨೭,೭೪,೭೮೩/-

ವಿಷಯ ಕ್ರಮಾಂಕ (4.3)

ವಿಷಯ:-2012-13 ಮತ್ತು 2013-14ನೇ ಸಾಲಿನ ವಸತಿ ನಿಲಯಗಳ ಹೆಚ್ಚುವರಿ ವಸತಿನಿಲಯಗಳ ಹೆಚ್ಚುವರಿ ಭೋಜನಾ ವೆಚ್ಚ ಬಾಕಿ ಹಣ ಪಾವತಿಸುವ ಕುರಿತು.

ಉಲ್ಲೇಖ:- 1. ನೋಟೀಸು ಸಂ.ಗುವಿಗು:ಪಜಾ/ಪಪಂ ಘಟಕ /2016-17/613 ದಿನಾಂಕ 06.02./2017

2. 2ನೇ ನೋಟೀಸು ಸಂ.222 ದಿನಾಂಖ 02.03.2017

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಖ 25.3.2017

ಟಿಪ್ಪಣೆ:-

2012-13 ಮತ್ತು 2013-14ನೇ ಸಾಲಿನ ವಸತಿ ನಿಲಯಗಳ ಹೆಚ್ಚುವರಿ ಭೋಜನಾ ವೆಚ್ಚ ಬಾಕಿ ಹಣದ ಕುರಿತು ಸುದೀರ್ಘವಾಗಿ ಸಮಿತಿಯಲ್ಲಿ ಚರ್ಚಿಸಿ, ನೃಪತುಂಗ ವಸತಿನಿಲಯದ ಆಗಿನ ಪರಿಪಾಲಕರಾದ ಡಾ.ಎಸ್.ಪಿ. ಮೇಲಕೇರಿ ಮತ್ತು ಈಗಿರುವ ಪರಿಪಾಲಕರಾದ ಡಾ.ನಿಂಗಣ್ಣಾ ಕಣ್ಣೂರ ಇವರಿಗೆ ನೋಟೀಸುನ್ನು ಉಲ್ಲೇದಲ್ಲಿ ನಮೂದಿಸಿದ ಪತ್ರಗಳ ಪ್ರಕಾರ ನೀಡಲಾಗಿತ್ತು. ಸದರಿಯವರು ಇನ್ನೂವರೆಗೂ ವರದಿಯನ್ನು ಸಲ್ಲಿಸಿರುವುದಿಲ್ಲ.

ಆದ್ದರಿಂದ, ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಗಮನಕ್ಕ ತರಲಾಗಿದೆ.

ವಿಷಯ ಕ್ರಮಾಂಕ (4.4)

ವಿಷಯ:-ಶ್ರೀ. ಮಹೇಶ ರಂಗದಾಳ, ವಿದ್ಯಾವಿಷಯಕ ಪರಿಷತ್ ಸದಸ್ಯರು ಅವರು ಸ್ಥಾನಿಕ ವಿಚಾರಣಾ ಸಮಿತಿಗೆ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಪರಿಗಣಿಸುವಂತೆ ಮಾನ್ಯ ಕುಲಪತಿಗಳಿಗೆ ನೀಡಿರುವ ಮನವಿ ಕುರಿತು.

ವಿಷಯ ಕ್ರಮಾಂಕ (5 )

ವಿಷಯ:- ಪ್ರಭಾರ ಭತ್ಯೆ ಮಂಜೂರಿಸುವ ಕುರಿತು.

ಉಲ್ಲೇಖ:- ಕುಲಸಚಿವರ ಅನುಮೋದನ ದಿನಾಂಕ 06.04.2017

ಟಿಪ್ಪಣಿ.

ಶ್ರೀ ಅಸ್ಲಾಮ್ ಬಿನ್ ಅಹ್ಮದ್, ಸಹಾಯಕ ಕುಲಸಚಿವರು, ಹಣಕಾಸು ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರು ದಿನಾಂಕ 01.07.2016 ರಿಂದ ಹಣಕಾಸು ವಿಭಾಗದ ಉಪಕುಲಸಚಿವರಾದ ಶ್ರೀ ಬಾಬುರಾವ ಹೊಸಮನಿ ಇವರು ದಿನಾಂಕ 30.06.2016 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಶ್ರೀ ಅಸ್ಲಾಮ್ ಬಿನ್ ಅಹ್ಮದ್ ತಮ್ಮ ಹುದ್ದೆಯ ಜೊತೆಗೆ ಶ್ರೀ ಬಾಬುರಾವ ಹೊಸಮನಿ ಇವರ ಹೆಚ್ಚುವರಿ ಕೆಲಸವನ್ನು ದಿನಾಂಕ 01.07.2016 ರಿಂದ

ನಿರ್ವಹಿಸುತ್ತಿದ್ದಾರೆ. ಸದರಿಯವರ ಮುಂದಿನ ಆದೇಶ ನೀಡುವವರೆಗೆ ಪ್ರಭಾರ ಭತ್ಯೆಯನ್ನು ಮಂಜೂರಿಸುವ ನಿಮಿತ್ಯ ಮನವಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ಪ್ರಯುಕ್ತ ಕರ್ನಾಟಕ ಸರ್ಕಾರಿ ಸೇವಾ ನಿಯಮ ಕಾಯ್ದೆ 68ರ ರನ್ವಯ (ಹುದ್ದೆಯ ಕನಿಷ್ಠತಮ ಮೂಲ ವೇತನದ) 36,300/-ಕ್ಕೆ ಶೇ. 7.5 ರಂತೆ ಮಂಜೂರಿಸಬಹುದು.

ಸದರಿಯವರ ಹುದ್ದೆ ಎ ಸಮೂಹ ಹುದ್ದೆಯಾಗಿದ್ದು, (ಗ್ರುಪ ಎ) ಪ್ರಭಾರ ಭತ್ಯೆ ಅವಧಿಯು ನಾಲ್ಕು ತಿಂಗಳಿಗಿಂತ ಕಡಿಮೆಯಾಗಿದ್ದಲ್ಲಿ ಕುಲಪತಿಗಳು ಮಂಜೂರು ಮಾಡಬಹುದಾಗಿತ್ತು, ಆದರೆ ಈ ಅವಧಿಯು ಎಂಟು ತಿಂಗಳಿಗೆ ಮೀರಿದ್ದರಿಂದ ಹಾಗೂ ಮುಂದಿನ ಆದೇಶದವರೆಗೆ ಪ್ರಭಾರ ಭತ್ಯೆ ಮಂಜೂರಿಸಲು ಈ ವಿಷಯವನ್ನು ಸಿಂಡಿಕೇಟು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### ಸಿಂಡಿಕೇಟ ಸದಸ್ಯರಾದ ಶ್ರೀ.ಈಶ್ವರ ಇಂಗನ ಅವರು ಮಂಡಿಸಿದ ಪ್ರಸ್ತಾವನೆಗಳು

ವಿಷಯ ಕ್ರಮಾಂಕ (6 )

1. JRF/RGNF ಶಿಷ್ಯವೇತನಕ್ಕೆ ಅರ್ಹರಾದ ವಿದ್ಯಾರ್ಥಿಗಳಿಗೆ Over and above quota ದಲ್ಲಿ ಪ್ರವೇಶ ನೀಡತಕ್ಕದ್ದು. ಇದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿದಂತಾಗುತ್ತದೆ.

2. ವಿಶ್ವವಿದ್ಯಾಲಯವು M.Phil/Ph.D Notification ಹೊರಡಿಸುವ ಸಂದರ್ಭದಲ್ಲಿ ವಿಭಾಗಗಳಿಂದ ಖಾಲಿ ಇರುವ ಸೀಟುಗಳ ವಿವರವನ್ನು ಪಡೆದಿದ್ದಾಗಿದೆ. ಆದರೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ಮುಗಿಸಿ ಪ್ರವೇಶ ನೀಡಬೇಕಾಗಿತ್ತು. ಆದರೆ ಈಗ ಹಾಗೆ ಆಗಿರುವುದಿಲ್ಲ ಆದ್ದರಿಂದ M.Phil ಹಾಗೂ Ph.D ಪ್ರವೇಶ ಕಲ್ಪಿಸುವ ಸಂದರ್ಭಧಲ್ಲಿ As on today Vacancy ಆಧಾರದ ಮೇಲೆ ಪ್ರವೇಶ ಅವಕಾಶ ಕಲ್ಪಿಸಿ ಕೊಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

3. ಅಧ್ಯಯನ ವಿಭಾಗಗಳ ಮಾರ್ಗದರ್ಶಕರಿಗೆ ಎಂ.ಫಿಲ್ ಅಧ್ಯಯನದಲ್ಲಿ ಎರಡು ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಅದರ ಬದಲಿಗೆ ಈ ವರ್ಷದಿಂದ ನಾಲ್ಕು ವಿದ್ಯಾರ್ಥಿಳನ್ನು ಹಂಚಿಕೆ ಮಾಡಬೇಕು.

ವಿಷಯ ಕ್ರಮಾಂಕ (7 )

ವಿಷಯ:- ಸಹಾಯಕ ಕುಲಸಚಿವರಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಶ್ರೀಹರಿ ದಶರಥರಾವ ಇವರು ಕಾಣೆಯಾದ ಪ್ರಯುಕ್ತ ಅವರ ಪತ್ನಿಗೆ ಹಣಕಾಸು ಸೌಲಭ್ಯಗಳನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:- 1) ಸಂಖ್ಯೆ ಗುವಿಕ/ಸಿಬ್ಬಂದಿ/ಪರೀಕ್ಷಾ/2015-16/7106, ದಿನಾಂಕ 27.02.2016
2) ಆರಕ್ಷರ ಉಪನಿರೀಕ್ಷಕರು ವಿಶ್ವವಿದ್ಯಾಲಯ ಪೋಲಿಸ್ ಠಾಣೆ ಇವರ ವರದಿ ದಿನಾಂಕ 26.03.2017
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ

ಶ್ರೀ ಶ್ರೀಹರಿ ದಶರಥರಾವ, ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರು ದಿನಾಂಕ 23.02.2016 ರಿಂದ ಕೆಲಸಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದರೆಂದು ಕುಲಸಚಿವರು (ಮೌಲ್ಯಮಾಪನ) ಇವರು ವರದಿಯನ್ನು ನೀಡಿರುತ್ತಾರೆ. ಸದರಿಯವರು ಸೇವೆಯಲ್ಲಿದ್ದರೆ ದಿನಾಂಕ 30.05.2016ಕ್ಕೆ ವಯೋನಿವೃತ್ತಿ ಹೊಂದಲಿದ್ದರು. ಸದರಿಯವರ ಪತ್ನಿ ಶ್ರೀಮತಿ ಅನಸೂಯಾ ಗಂಡ ಶ್ರೀ ಶ್ರೀಹರಿ ದಶರಥರಾವ ಇವರು ತಮ್ಮ ಪತಿ ಕಾಣೆಯಾದ ಬಗ್ಗೆ ಗುಲಬರ್ಗಾ ವಿಶ್ವವಿದ್ಯಾಲಯದ ಪೋಲಿಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 0091/2016ನ್ನು ದಾಖಲಿಸಿರುತ್ತಾರೆ. ಸದರಿಯವರು 23.02.2016 ರಿಂದ ಇಲ್ಲಿಯವರೆಗೆ ಕಾಣೆಯಾಗಿರುತ್ತಾರೆ. ಈ ವಿಶ್ವವಿದ್ಯಾಲಯ ಪೋಲಿಸ್ ಠಾಣೆಯ ಆರಕ್ಷರ ಉಪನಿರೀಕ್ಷಕರು (Sub - Inspector) ಅವರು ಕಾಣೆಯಾದ ಪ್ರಕರಣದಲ್ಲಿ ತನಿಖೆ ಕೈಕೊಂಡಿದ್ದು 06 ತಿಂಗಳುಗಳ ಕಾಲ ಎಲ್ಲಾ ರೀತಿಯ ತನಿಖಾ ವಿಧಾನಗಳನ್ನು ಕೈಕೊಂಡಿದ್ದು, ಶ್ರೀ ಶ್ರೀಹರಿಯವರು ಪತ್ತೆಯಾಗದೆ ಇರುವುದಿದಾಗಿ ವರದಿ ನೀಡಿದ್ದಾರೆ. ಶ್ರೀಮತಿ ಅನಸೂಯಾ ಅವರು ತಮ್ಮ ಪತಿ ಕಾಣೆಯಾಗಿದ್ದ ಪ್ರಯುಕ್ತ ಮತ್ತು ಸರಕಾರಿ ಆದೇಶ ಸಂಖ್ಯೆ ಆರ್ಥಿಕ (ವಿಶೇಷ) 11 ಕುವಿವೇ 87 ಬೆಂಗಳೂರು ದಿನಾಂಕ 21.03.1988 ರಂತೆ ಫೆಬ್ರವರಿ - 2016 ರಿಂದ ಮೇ -2016ರ ವರೆಗೆ ಸಂಬಳ, ಗಳಿಕೆ ರಜೆ ನಗದೀಕರಣ ಹಣ ಮತ್ತು ಪಿಂಚಣಿ ಸೌಲಭ್ಯಗಳನ್ನು ಮಂಜೂರಿಸಲು ವಿನಂತಿಸಿರುತ್ತಾರೆ. ಆದ್ದರಿಂದ ಸದರಿಯವರಿಂದ ಸರ್ಕಾರಿ ಆದೇಶದಂತೆ ನಷ್ಟಭರ್ತಿ ಪತ್ರ ಪಡೆದುಕೊಂಡು ಈ ಸದ್ಯ ಕೆ.ಸಿ.ಎಸ್.ಆರ್. ನಿಯಮಗಳ ಅನ್ವಯ ಮೇರೆಗೆ ಅವಕಾಶವಿರುವ ಸೌಲಭ್ಯಗಳನ್ನು ವಿಸ್ತರಿಸಲಾಗುವುದು. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿಷಯ ಕ್ರಮಾಂಕ (8 )

ವಿಷಯ:-ಡಾ.ಚಂದ್ರಕಾಂತ ಎಂ.ಯಾತನೂರು ಇವರಿಗೆ (CUK) ಕೇಂದ್ರೀಯ ವಿಶ್ವವಿದ್ಯಾಲಯದ ನಿಯೋಜನೆ ಶರತ್ತು ಮತ್ತು ನಿಬಂಧನೆಗಳ ಕುರಿತು.

ವಿಷಯ ಕ್ರಮಾಂಕ (9 )

ವಿಷಯ:- ಸಸ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಮಾಡಿರುವ ದೂರುಗಳ ಬಗ್ಗೆ ಪರಿಶೀಲಿಸಲು ಕುಲಸಚಿವರು ಮತ್ತು ಅಧಿಕಾರಿಗಳು ವಿಭಾಗಕ್ಕೆ ಭೇಟಿ ನೀಡಿ ಸಿದ್ಧಪಡಿಸಿದ ವರದಿ ಸಿಂಡಿಕೇಟ ಪರಿಶೀಲನೆಗಾಗಿ

ವಿಷಯ ಕ್ರಮಾಂಕ (10 )

ವಿಷಯ:- ಗುಲಬರ್ಗಾ ವಿಶ್ವವಿದ್ಯಾಲಯದ ಪ್ರೌಢ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಗೌರವ ವೇತನ ನೀಡಲಾದ ಕುರಿತು .

ಕುಲಪತಿಗಳು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ